**ಎಸ್.ಡಿ.ಎಂ.ಸಿ ತರಬೇತಿ ಪ್ರಗತಿ 2012-13**

ಪ್ರಾಥಮಿಕ ಶಾಲೆಗಳಲ್ಲಿನ ಎಸ್.ಡಿ.ಎಂ.ಸಿ. ಸದಸ್ಯರಿಗೆ ಮತ್ತು ಸಿ.ಎ.ಸಿ ಸದಸ್ಯರಿಗೆ **2012-13**ನೇ ಸಾಲಿನಲ್ಲಿ **2** ದಿನಗಳ ತರಬೇತಿ ಮತ್ತು **1** ದಿನದ ಕ್ಲಸ್ಟರ್ ಸಮಾಲೋಚನಾ ಸಭೆಯನ್ನು ನಡೆಸಲಾಯಿತು. ಮಕ್ಕಳ ಕಲಿಕಾ ಮಟ್ಟ ಹೇಗಿದೆ ಮತ್ತು ಹೇಗೆ ಉತ್ತಮಪಡಿಸಬಹುದು, ಭೌತಿಕ ಸ್ಥಿತಿಗತಿಗಳು ಹೇಗಿವೆ, ಏನೇನು ಅವಶ್ಯಕತೆಗಳನ್ನು ಪೂರೈಸಬೇಕಾಗುತ್ತದೆ, ಮತ್ತು ಸಮುದಾಯವನ್ನು ಈ ಪೂರೈಸುವಿಕೆಯ ಪ್ರಕ್ರಿಯೆಯಲ್ಲಿ ಹೇಗೆ ತೊಡಗಿಸಿಕೊಳ್ಳಬೇಕು ಎನ್ನುವುದೇ ಈ ತರಬೇತಿಯ ಉದ್ದೇಶ. ಶಾಲಾ ಅಭಿವೃದ್ಧಿ ಯೋಜನೆಯ ತಯಾರಿ, ಶಾಲೆಯಿಂದ ಹೊರಗುಳಿದ ಮಕ್ಕಳು (ಓ.ಓ.ಎಸ್.ಸಿ) ಹಾಗೂ ಗುಣಾತ್ಮಕ ಶಿಕ್ಷಣ ನೀಡಲು ಅನುಸರಿಸಬೇಕಾದ ವಿಧಾನಗಳ ಬಗ್ಗೆ ಸದಸ್ಯರೊಂದಿಗೆ ಚರ್ಚಿಸಲಾಯಿತು. ಸದಸ್ಯರ ಅನುಭವಗಳ ಹಂಚಿಕೆ ಹಾಗೂ ಅವರು ಶಾಲಾ ಅಭಿವೃದ್ಧಿಯಲ್ಲಿ ತೊಡಗಿಸಿಕೊಳ್ಳಬೇಕಾದ ಅಗತ್ಯತೆ ಬಗ್ಗೆ ತಿಳುವಳಿಕೆ ನೀಡಲಾಯಿತು. ಸಂಗಮ ಮತ್ತು ಸಮದರ್ಶಿ ಸಾಹಿತ್ಯ ಸಂಚಯನವನ್ನು ಬಳಸಿ ತರಬೇತಿಯನ್ನು ನೀಡಲಾಗಿದೆ.

| ಕ್ರ.ಸಂ | ತರಬೇತಿ ಸಂಚಿಯ ಹೆಸರು | ಉದ್ದೇಶ | ಪುಸ್ತಕದಲ್ಲಿ ಇರುವ ವಿಷಯಗಳು(ಸಂಕ್ಷಿಪ್ತವಾಗಿ) |
|---|---|---|---|
| 1 | ಸಂಗಮ   | ಎಸ್.ಡಿ.ಎಂ.ಸಿ ರಚನೆಯ ಬಗ್ಗೆ ಪ್ರಧಾನ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಶಾಲೆಗಳಿಗೆ ಸಮಗ್ರ ಮಾಹಿತಿ ತರಬೇತಿ ಸಾಹಿತ್ಯ ಪುಸ್ತಕ. | ಆರ್.ಟಿ.ಇ ಕಾಯ್ದೆ ಪ್ರಕಾರ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ರಚನೆಯ ಬಗ್ಗೆ ಮಾರ್ಗದರ್ಶನ, ಎಸ್.ಡಿ.ಎಂ.ಸಿಯ ಇತಿಹಾಸ, ಬೆಳವಣಿಗೆ ಹಾಗೂ ಮಹತ್ವದ ಬಗ್ಗೆ ಮಾಹಿತಿ, ಶಾಲಾ ಅಭಿವೃದ್ಧಿ ಯೋಜನೆ ತಯಾರಿ ಬಗ್ಗೆ ಸಲಹೆಗಳು |
| 2 | ಸಮದರ್ಶಿ   | ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸದಸ್ಯರಿಗೆ ನೀಡುವ ಸಾಹಿತ್ಯ ಸಂಚಿ. | ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸದಸ್ಯರ ಪಾತ್ರ ಮತ್ತು ಜವಾಬ್ದಾರಿಯ ಬಗ್ಗೆ ಮಾಹಿತಿ. ಈ ಪುಸ್ತಕವು ಎಸ್.ಡಿ.ಎಂ.ಸಿ ಸಭೆಗಳ ದಿನಾಂಕಗಳು, ಸಭೆಯ ನಿರ್ಧಾರಗಳು, ಸಭೆಯ ನಡವಳಿಗಳು, ಮತ್ತು ಇತರೆ ಉಪಯುಕ್ತ ವಿಷಯಗಳನ್ನು ವಿವರವಾಗಿ ನಮೂದಿಸಲು ಇರುವ ಪುಸ್ತಕ. ಸಮದರ್ಶಿ ಪುಸ್ತಕವು ಪ್ರತಿ ಎಸ್.ಡಿ.ಎಂ.ಸಿ-ಸಿ.ಎ.ಸಿ ಸದಸ್ಯ ಕಾರ್ಯಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತದೆ. |

**ಎಸ್.ಡಿ.ಎಂ.ಸಿ ತರಬೇತಿ (ಭೌತಿಕ ಗುರಿ)**

| ಫಲಾನುಭವಿಗಳು | 2012-13 ನೇ ಸಾಲಿನ ಭೌತಿಕ ಗುರಿ | 2012-13 ನೇ ಸಾಲಿನ ಸಾಧನೆ |
|---|---|---|
| | ಭೌತಿಕ | ಭೌತಿಕ |
| ಎಸ್.ಎಂ.ಸಿ.(ಸನಿವಾಸ) | | |
| ಸ್ಥಳೀಯ ಪ್ರಾಧಿಕಾರ(ಸನಿವಾಸ ರಹಿತ) | 22508 | 4118 |
| ಎಸ್.ಎಂ.ಸಿ.(ಸನಿವಾಸ ರಹಿತ) | 717855 | 260475 |
| | **740363** | **264593** |

**2012-13ನೇ ಸಾಲಿನಲ್ಲಿ ಭೌತಿಕ ಗುರಿ ಶೇ.35.7% ಆಗಿರುತ್ತದೆ. ಇದಕ್ಕೆ ಕಾರಣ:**

- ಎಸ್.ಡಿ.ಎಂ.ಸಿ ಪುನರ್ರಚನೆಯ ಬಗ್ಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯ ಪರಿಷ್ಕೃತ ಸರ್ಕಾರದ ಆದೇಶ ಜಾರಿ ಆದ ನಂತರ ಎಸ್.ಡಿ.ಎಂ.ಸಿ ಪುನರ್ರಚನೆ ಡಿಸೆಂಬರ್ 2012 ರಿಂದ ಪ್ರಾರಂಭವಾಯಿತು. ಇದು ಭೌತಿಕ ಗುರಿ ಕಡಿಮೆಯಾಗಲು ಕಾರಣವಾಗಿದೆ.
- ತರಬೇತಿಗಾಗಿ ಎರಡನೆಯ ಕಂತಿನ ಅನುದಾನ ಎಂ.ಹೆಚ್.ಆರ್.ಡಿ ಯವರಿಂದ ಮಾರ್ಚ್ 2013 ರಲ್ಲಿ ಬಿಡುಗಡೆಯಾಯಿತು. ಅನುದಾನದ ಕೊರತೆ ಇದ್ದುದರಿಂದ ಭೌತಿಕ ಗುರಿಯಲ್ಲಿ ಇಳಿಕೆ ಉಂಟಾಗಿದೆ.

| | |
|---|---|
|  |  |
| ಯಾದಗಿರಿ ಬ್ಲಾಕ್ ನಲ್ಲಿ ನಡೆದ ಎಸ್.ಡಿ.ಎಂ.ಸಿ ತರಬೇತಿ (14-12-2012) | ಜಿಲ್ಲಾ ಮಟ್ಟದ ಎಸ್.ಡಿ.ಎಂ.ಸಿ ತರಬೇತಿ ಉದ್ಘಾಟನೆ ಶ್ರೀ ಜಿ.ಆರ್ ಕೆಂಚರೆಡ್ಡರ್ ಪ್ರಾಂಶುಪಾಲರು ಡಯಟ್ ಪ್ರಾಂಶುಪಾಲರಿಂದ |
|  |  |
| ಉಡುಪಿಯಲ್ಲಿ ನಡೆದ ಎಸ್.ಡಿ.ಎಂ.ಸಿ ತರಬೇತಿ | ಚಾಮರಾಜನಗರ ಬ್ಲಾಕ್ ನಲ್ಲಿ ಸಿ.ಆರ್.ಪಿಯವರು ಎಸ್.ಡಿ.ಎಂ.ಸಿ ಸದಸ್ಯರಿಗೆ ತರಬೇತಿ ನೀಡುತ್ತಿರುವುದು. |
|  |  |

| ಕೊಪ್ಪಳದಲ್ಲಿ ನಡೆದ ಎಸ್.ಡಿ.ಎಂ.ಸಿ ತರಬೇತಿ | ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಕಾರ್ಯದರ್ಶಿಗಳು ಎಫ್.ಜಿ.ಡಿ ಪಿರಿಯಾಪಟ್ಟಣ ತಾಲ್ಲೂಕಿನಲ್ಲಿ ಭಾಗವಹಿಸುತ್ತಿರುವುದು |
|---|---|

## ಎಸ್.ಡಿ.ಎಂ.ಸಿಯನ್ನು ಹೊರತುಪಡಿಸಿ ಶಾಲಾಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಮಿತಿಗಳು

| ಕ್ರ.ಸಂ | ಜಿಲ್ಲೆಯ ಹೆಸರು | ಸಮಿತಿಯ ಹೆಸರು | ಒಟ್ಟು ಸಂಖ್ಯೆ |
|---|---|---|---|
| 1 | ಬಾಗಲಕೋಟೆ | ಇಲ್ಲ | |
| 2 | ಬೆಂಗಳೂರು ನಗರ | ಮೀನಾ ಕ್ಲಬ್ | 1821 |
| | | ತಾಯಂದಿರ ಸಂಘ | 1821 |
| 3 | ಬೆಂಗಳೂರು ಗ್ರಾಮಾಂತರ | ಮೀನಾ ಕ್ಲಬ್ | 723 |
| | | ಕಿಶೋರಿ | 1008 |
| 4 | ಬೆಳಗಾಂ | ಇಲ್ಲ | |
| 5 | ಬಳ್ಳಾರಿ | ಮೀನಾ ಕ್ಲಬ್ | 842 |
| 6 | ಬೀದರ್ | ಇಲ್ಲ | |
| 7 | ಬಿಜಾಪುರ | ಇಲ್ಲ | |
| 8 | ಚಾಮರಾಜನಗರ | ಇಲ್ಲ | |
| 9 | ಚಿಕ್ಕಬಳ್ಳಾಪುರ | ಸಾರ್ವಜನಿಕ ಯುವಸಂಘಟನೆಗಳು | 10 |
| 10 | ಚಿಕ್ಕಮಗಳೂರು | ಇಲ್ಲ | 0 |
| 11 | ಚಿತ್ರದುರ್ಗ | ಇಲ್ಲ | |
| 12 | ದಕ್ಷಿಣ ಕನ್ನಡ | ತಾಯಂದಿರ ಸಂಘ | 932 |
| 13 | ದಾವಣಗೆರೆ | ತಾಯಂದಿರ ಸಂಘ | 1522 |
| 14 | ಧಾರವಾಡ | ಇಲ್ಲ | |
| 15 | ಗದಗ್ | ಇಲ್ಲ | |
| 16 | ಗುಲ್ಬರ್ಗ | ಮೀನಾ ಕ್ಲಬ್ | 1009 |
| 17 | ಹಾಸನ | ತಾಯಂದಿರ ಸಂಘ | 2503 |
| 18 | ಹಾವೇರಿ | ಮೀನಾ ಕ್ಲಬ್ | 705 |
| 19 | ಕೊಡಗು | ಇಲ್ಲ | |
| 20 | ಕೋಲಾರ | ಇಲ್ಲ | |
| 21 | ಕೊಪ್ಪಳ | ಇಲ್ಲ | |
| 22 | ಮಂಡ್ಯ | ತಾಯಂದಿರ ಸಂಘ | 1836 |
| 23 | ಮೈಸೂರು | ಶಾಲಾ ಸರ್ಕಾರ | 2066 |
| | | ಮೀನಾ ಕ್ಲಬ್ | 1082 |

| | | | |
|---|---|---|---|
| | | ವಿಜ್ಞಾನ ಕ್ಲಬ್ | 1082 |
| | | ಆರ್ಟ್ಸ್ ಕ್ಲಬ್ | 1082 |
| | | ಹಳೆ ವಿದ್ಯಾರ್ಥಿಗಳ ಸಂಘ | 250 |
| | | ಪಾಲಕರ ಸಮಿತಿ | 2066 |
| | | ತಾಯಂದಿರ ಸಂಘ | 2066 |
| | | ಕಟ್ಟಡ ನಿರ್ಮಾಣ ಸಮಿತಿ | 1082 |
| | | ರಾಷ್ಟ್ರೀಯ ಹಬ್ಬಗಳ ಸಮಿತಿ | 1082 |
| | | ಮಕ್ಕಳ ಹಕ್ಕುಗಳ ಕ್ಲಬ್ | 2066 |
| | | ಸೇವಾದಳ | 1000 |
| | | ಸ್ಕೌಟ್ಸ್ ಮತ್ತು ಗೈಡ್ಸ್ | 1000 |
| | | ಮ್ಯಾಥಮೆಟಿಕ್ಸ್ ಕ್ಲಬ್ | 1082 |
| 24 | ರಾಯಚೂರು | ಇಲ್ಲ | |
| 25 | ರಾಮನಗರ | ಇಲ್ಲ | |
| 26 | ಶಿವಮೊಗ್ಗ | ಇಲ್ಲ | |
| 27 | ತುಮಕೂರು | ಮೀನಾ ಕ್ಲಬ್ | 1319 |
| | | ತಾಯಂದಿರ ಸಂಘ | 1319 |
| 28 | ಉಡುಪಿ | ಇಲ್ಲ | |
| 29 | ಉತ್ತರಕನ್ನಡ | ತಾಯಂದಿರ ಸಂಘ | 2126 |
| | | ಪಾಲಕರ ಸಮಿತಿ | 2126 |
| 30 | ಯಾದಗಿರಿ | ಇಲ್ಲ | |

1. **ತಾಯಂದಿರ ಸಮಿತಿ:** ಈ ಸಮಿತಿಯು ಮಧ್ಯಾಹ್ನದ ಉಪಹಾರ ಯೋಜನೆಯ ಮೇಲುಸ್ತುವಾರಿಯನ್ನು ನಡೆಸುತ್ತದೆ. ಎಲ್ಲಾ ಶಾಲೆಗಳಲ್ಲಿ ವಿದ್ಯಾರ್ಥಿಗಳ ತಾಯಂದಿರು ಶಾಲೆಗೆ ಭೇಟಿ ನೀಡಿ ಮಧ್ಯಾಹ್ನದ ಉಪಹಾರದ ಗುಣಮಟ್ಟ, ರುಚಿಯ ಬಗ್ಗೆ ಪರಿಶೀಲಿಸಿ ದಾಖಲಿಸಿರುವ ಪುಸ್ತಕ ಇರುತ್ತದೆ. ತಾಯಂದಿರ ಸಮಿತಿಯ ಸದಸ್ಯರು ವಿದ್ಯಾರ್ಥಿಗಳ ಓದುವಿಕೆ ಮತ್ತು ಬರವಣಿಗೆಯ ಬಗ್ಗೆ ಪರಿಶೀಲಿಸುತ್ತಾರೆ.
2. **ಮೀನಾ ಕ್ಲಬ್:** ಮೀನಾ ಕ್ಲಬ್ ಎಂಬುದು ಹಿರಿಯ ಪ್ರಾಥಮಿಕ ಶಾಲೆಯಲ್ಲಿನ ಬಾಲಕಿಯರ ಚರ್ಚಾವೇದಿಕೆ. ಆಯಾ ಗ್ರಾಮಗಳಲ್ಲಿ ಬಾಲಕಿಯರ ಶಿಕ್ಷಣವನ್ನು ಪ್ರೋತ್ಸಾಹಿಸುವ ಪ್ರಯತ್ನಗಳನ್ನು ಕ್ಲಬ್ ಕೈಗೊಳ್ಳುತ್ತದೆ. ಅವರು ತಮ್ಮನ್ನು ತಾವು ಅಭಿವ್ಯಕ್ತಗೊಳಿಸುವ ಕಲೆಯನ್ನು, ಜೀವನ ಕೌಶಲ್ಯಗಳನ್ನು ಕಲಿತಿರುವ ಹಾಗೂ ನಾಯಕತ್ವದ ಗುಣಗಳನ್ನು ವಿಕಾಸಗೊಳಿಸಿಕೊಳ್ಳುತ್ತಾರೆ.

**ಎಸ್.ಡಿ.ಎಂ.ಸಿ ಸಬೆಯ ವಿವರಗಳು:**

ಶಾಲೆಗಳಲ್ಲಿ ಪ್ರತಿ ತಿಂಗಳು ಎಸ್.ಡಿ.ಎಂ.ಸಿ ಸಭೆಗಳು ನಡೆಯುತ್ತವೆ. ಸಭೆಗಳಲ್ಲಿ ಶಾಲೆಯ ಪಠ್ಯೇತರ ಚಟುವಟಿಕೆಗಳ ಬಗ್ಗೆ ಚರ್ಚೆಗಳು, ತೀರ್ಮಾನಗಳು ನಡೆಯುತ್ತದೆ. ಮಂಜೂರಾದ ಅನುದಾನ ಮತ್ತು ಕೊಡುಗೆಯಾಗಿ ನೀಡಿದ ಹಣದ ಸದ್ಬಳಕೆಯ ಬಗ್ಗೆ ತೀರ್ಮಾನಗಳು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ.

| ನಡೆಸಿದ ಕೊನೆಯ 6 ಸಭೆಗಳು | ಭಾಗವಹಿಸುವಿಕೆ ಮಟ್ಟ (ನಿರ್ದಿಷ್ಟವಾಗಿ ಮಹಿಳೆಯರು ಮತ್ತು ಎಸ್.ಸಿ, ಎಸ್.ಟಿ ಸದಸ್ಯರು |
|---|---|
| **1.** ಮೇ **30** ರಂದು ಶಾಲೆಗಳ ಪುನರಾರಂಭ ಬಗ್ಗೆ ಚರ್ಚೆ | 75-80% |
| **2.** **5**ನೇ ಜುಲೈ **2012**ರಂದು ಶಾಲೆಗಾಗಿ ನಾವು ನೀವು ಕಾರ್ಯಕ್ರಮದ ಬಗ್ಗೆ ಚರ್ಚೆ | 75-80% |
| **3.** ಸೆಪ್ಟೆಂಬರ್ **2012** ಮೊದಲ ಸಮುದಾಯದತ್ತ ಶಾಲಾ ಕಾರ್ಯಕ್ರಮ | 75-80% |
| **4.** ನವೆಂಬರ್ **7** ನೇ **2012** ರಂದು ಗ್ರಂಥಾಲಯ ದಿನ | 75-80% |
| **5.** ಶಾಲಾ ವಾರ್ಷಿಕೋತ್ಸವದ ಬಗ್ಗೆ ಚರ್ಚಿಸಲು ಡಿಸೆಂಬರ್ **2012**ರಂದು ಸಭೆ | 75-80% |
| **6.** ಕಲಿಕಾ ಬೋಧನಾ ಪ್ರಕ್ರಿಯೆಗಳ ಮತ್ತು ವಾರ್ಷಿಕ ಪರೀಕ್ಷಾ ತಯಾರಿ ಬಗ್ಗೆ ಜನವರಿ **2013** ರಂದು ಸಭೆ | 75-80% |




**ಕ್ಲಸ್ಟರ್ ಮಟ್ಟದಲ್ಲಿ ಎಸ್.ಡಿ.ಎಂ.ಸಿ ತರಬೇತಿ**




***ಶ್ರೀ ರಮೇಶ್ ಜಿಗಜಿಣಗಿ, ಮಾನ್ಯ ಲೋಕಸಭಾ ಸದಸ್ಯರು ಬಿಜಾಪುರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ: 29-01-2013ರಂದು ನಡೆದ ಎಸ್.ಡಿ.ಎಂ.ಸಿ ಸಭೆ (ಬಿಜಾಪುರ)***

**ಎಸ್.ಡಿ.ಎಂ.ಸಿ ತರಬೇತಿ - 2013-14**

| | | | |
|---|---|---|---|
| 1. | ಒಟ್ಟು ಶಾಲೆಗಳು | = | 44,672 |
| 2. | ಪ್ರತಿ ಶಾಲೆಯಿಂದ ಎಸ್.ಡಿ.ಎಂ.ಸಿ ತರಬೇತಿ ಪಡೆಯಬೇಕಾದವರ ಸಂಖ್ಯೆ | = | 6 |
| 3. | ತರಬೇತಿ ಪಡೆಯಬೇಕಾದ ಒಟ್ಟು ಸದಸ್ಯರ ಸಂಖ್ಯೆ | = | 268032 |
| 4. | ಮಂಜೂರಾದ ಅನುದಾನ | = | 536.06 ಲಕ್ಷಗಳು |